# ಶಾಸನಗಳಲ್ಲಿ ಯಕ್ಷಿ ಜ್ವಾಲಾಮಾಲಿನಿ ಮಹಿಮೆ

ಪ್ರಾಳೇಯಾಮಳಿನಾಂಗಿ ತುಂಗಮಹಿಷೇಂದ್ರಾರೂಢೆಯಾತ್ಮಾ ಷ್ಟದೋ
ರ್ಮಾಳಾಂಳಕೃತೆ ಚಕ್ರಶೂಲಶರ ಚಾಪೋತ್ಕೇತು ಚಂಚತ್ಕಶಾ
ಭೀಳಾಸಿಸ್ಫಟ ಖೇಟಕಾನ್ವಿತೆ ಚಳದ್ಬಾಳಾಕ್ಷಿ ಸಂಪ್ರೀತಿಯಿಂ
ಜ್ವಾಳಾಮಳಿನಿ ಮಾಳ್ಕೆ ಮತ್ಕೃತಿಗೆ ನಿರ್ವಿಘ್ನೋಕ್ತಿ ನಿರ್ವಾಹಮಂ ||

– ಅಗ್ಗಳ, ೧೧೮೯, ಚಂದ್ರಪ್ರಭ ಪುರಾಣಂ, ೧–೯

ಹಿಮದಂತೆ ಪರಿಶುಭ್ರವಾದ ದೇಹವುಳ್ಳ, ಮಹಾಮಹಿಷವನ್ನು (ಕೋಣ) ಏರಿದ, ಎಂಟು ತೋಳುಗಳನ್ನುಳ್ಳ, ಚಕ್ರ ಶೂಲ ಬಾಣ ಬಿಲ್ಲು ಕೇತು ಪಾಶ ಖಡ್ಗ ಗುರಾಣಿ ಇವನ್ನು ಒಳಗೊಂಡ, ಚಂಚಲವಾದ ಹಣೆಗಣ್ಣನ್ನುಳ್ಳ ಜ್ವಾಲಾಮಾಲಿನಿದೇವಿಯು ಪರಮ ಪ್ರೇಮದಿಂದ ಕಾವ್ಯ ಕೃತಿಗೆ ಯಾವ ಅಡ್ಡಿಗಳೂ ಒದಗದಂತೆ ಮಾಡಲಿ–ಎಂಬುದಾಗಿ ಅಗ್ಗಳಕವಿಯು ಪಾರ್ಥಿಸಿದ್ದಾನೆ; ಇದು ಆಶಾಧರ (ಪ್ರತಿಷ್ಠಾಸಾರೋದ್ಧಾರ, ೩–೧೬೨) ಮತ್ತು ನೇಮಿಚಂದ್ರ (ಪ್ರತಿಷ್ಠಾ ತಿಲಕ, ಪು. ೩೪೩) ಕೊಡುವ ವರ್ಣನೆಗೆ ಅನುಗುಣವಾಗಿದೆ. ಕ್ರಿ.ಶ. ಒಂದು ಮತ್ತು ಎರಡನೆಯ ಶತಮಾನದ ವೇಳೆಗೆ ಯಕ್ಷ–ಯಕ್ಷಿಯರು ಜೈನ ದೈವ ಪರಿವಾರದೊಳಗೆ ಸೇರಿ ಜಿನ ಶಾಸನದೇವತೆಗಳಾಗಿ ರೂಪುಗೊಂಡರು.

ತನಗೆ ತನೂಭವರಿಲ್ಲದೆ
ಮನದೊಳು ಚಿಂತಿಸುತಮಿರ್ದ್ದು ಪದ್ಮಪ್ರಭನಾ
ಪ್ಪಿನ ಕಣಿ ಶಾಸನ ದೇವತೆ
ಯ(ನು) ಪೂಜಿಸಿ ದಿವ್ಯ ಮಂತ್ರದಿಂ ಸಾಧಿಸಿದಂ ||

[ಎ.ಕ. ೭-೧, ಶಿವಮೊಗ್ಗ ೬೪. ೧೧೧೨. ಪು. ೬೬. ಸಾಲು: ೪೩]

ಹೀಗೆ ಶಾಸನದೇವತೆಗಳು ವರ ಪ್ರದಾನ ಮಾಡುವರೆಂಬ ತುಂಬ ನಂಬುಗೆ ಯೊಂದು ಸಾರ್ವತ್ರಿಕವಾಯಿತು. ಯಕ್ಷ ಯಕ್ಷಿಯರು, ಕ್ಷೇತ್ರಪಾಲರು (ಜಟ್ಟಿಂಗರಾಯ, ಯಕ್ಷಿಗರಾಯ), ವಿದ್ಯಾದೇವಿಯರು, ಶ್ರುತದೇವಿಯರು ಎಂಬಿತ್ಯಾದಿ ಪರಿಕಲ್ಪನೆಗೆ, ಕರ್ನಾಟಕದ ಸಂದರ್ಭದಲ್ಲಿ. ಜೀವ ತುಂಬಿದವರು ಯಾಪನೀಯ ಸಂಘದವರು. **[KAMALA HAMPANA: Attimabbe and Chalukyas, 1195, 29-31]** ಕರ್ನಾಟಕದ ಹಲವು ರಾಜಮನೆತನಗಳು ಜೈನ ಆಚಾರ್ಯರ ಅನುಗ್ರಹದಿಂದ ಸ್ಥಾಪನೆ ಗೊಂಡಿರುವ ವಿಚಾರವನ್ನು ಶಿಲಾಶಾಸನಗಳ ಆಧಾರದಿಂದ ಅರಿಯಬಹುದು. ಗಂಗರು ರಟ್ಟರು ಕದಂಬರು ಚಾಲುಕ್ಯರು ಹೊಯ್ಸಳರು ಶಿಲಾಹಾರರು ಚೆಂಗಾಳ್ವರು ಕೊಂಗಾಳ್ವರು ಚೌಟರು ಅಜಿಲರು ಬಂಗರು ಸೇವುಣರು ಬಿಳಿಗಿಯರಸರು ತೆವರ–ತೆಪ್ಪದ–ಸಾಮಂತರು ಬಾರಂಗಿ–ಸಾಮಂತರು ಚಿಕ್ಕಮಾಗಡಿ–ಸಾಮಂತರು ನಗಿರೆಯವರು, ಸಾಳುವರು ಸಾಂತರರು ಸೇನವಾರರು ಚಲ್ಲ ಕೇತನರು ಸಗರ–ಮಣಲೆಯರು ಸಿಂದರು–ಹೀಗೆ ಹಲವು ಹೊಡ್ಡ–ಸಣ್ಣ ರಾಜವಂಶಗಳು ಜೈನ ಕೊಡೆಯ ಅಡಿಯಲ್ಲಿ ಹುಟ್ಟಿ ಬೆಳೆದುವು.

ಜೈನ ಆಚಾರ್ಯರ ಕೃಪೆ ಮತ್ತು ಆಶೀರ್ವಾದ ಹೊತ್ತು ಹುಟ್ಟಿದ ಈ ಕೆಲವು ರಾಜಮನೆತನಗಳಲ್ಲಿ, ಜೈನ ಯಕ್ಷರ ಪೂಜಾ ಪದ್ಧತಿಯ ಪ್ರಭಾವ ಗಾಢವಾಗಿದ್ದುದು ಕಂಡುಬರುತ್ತದೆ. ಅದರಲ್ಲಿಯೂ ವಿಶೇಷವಾಗಿ ಚಕ್ರೇಶ್ವರಿ, ಪದ್ಮಾವತೀದೇವಿ, ಚಾಮುಂಡಾ, ಕೂಷ್ಮಾಂಡಿನೀದೇವಿ ಮತ್ತು ಜ್ವಾಲಾಮಾಲಿನೀದೇವಿ–ಈ ಜಿನಶಾಸನ ದೇವತೆಗಳ ಪ್ರಭಾವ ರಾಜಕುಲಗಳಲ್ಲಿಯೂ ಇದ್ದುದಾಗಿ ಶಾಸನಗಳಿಂದಲೇ ತಿಳಿದು ಬರುತ್ತದೆ. ಪದ್ಮಾವತಿಯು ಜೈನರ ೨೩ ನೆಯ ತೀರ್ಥಂಕರರಾದ ಪಾರ್ಶ್ವನಾಥರ ಯಕ್ಷಿ, ಚಾಮುಂಡಾದೇವಿಯು ಎಂಟನೆಯ ತೀರ್ಥಂಕರರಾದ ಚಂದ್ರಪ್ರಭ ನಾಥರ ಯಕ್ಷಿ. ಗಂಗರು ಮತ್ತು ಹೊಯ್ಸಳರು ತಮ್ಮ ಸಾಮ್ರಾಜ್ಯವು

ಪದ್ಮಾವತೀ ದೇವಿಯಿಂದ ಬಂದ ಹಸಾದವೆಂದು ಹೇಳಿಕೊಂಡಿದ್ದಾರೆ. ಅದಂತೆಯೇ ಇನ್ನೂ ಕೆಲವು ಅರಸುಕುಲಗಳೂ, ಮಹಾಸಾಮಂತ ಮಹಾಮಂಡಲೇಶ್ವರರೂ ಸಹ ಜಿನಶಾಸನದೇವತೆಯಾದ ಪದ್ಮಾವತೀದೇವಿಯು ಕರುಣಿಸಿದ ವರಪ್ರಸಾದದಿಂದ ತಾವು ಸುಖಪರಂಪರೆಯನ್ನು ಪಡೆದುದಾಗಿ ಹೆಮ್ಮೆಯಿಂದ ಹೇಳಿಕೊಂಡಿವೆ. ಇದಕ್ಕೆ ಮೂರುನಾಲ್ಕು ನಿದರ್ಶನಗಳನ್ನು ಕೇವಲ ಶಾಸನಗಳಿಂದ, ಉದಾಹರಿಸುತ್ತೇನೆ:

೧. ಕೆಲವಾನು ದಿವಸದಿಂದ ಪದ್ಮಾವತೀ ದೇವಿಯಂ ವಿಧಿಪೂರ್ವ್ವಕಮಾಃವಾನಂಗೆಯ್ದು ವರಂಬಡೆದು ಖಳ್ಗಮುಮಂ ಸಮಸ್ತರಾಜ್ಯಮನವಗ್ರ್ಗೆಮಾಡೆ
[ಎ.ಕ. ೭-೧, ಶಿವಮೊಗ್ಗ ೪. ೧೧೨೨ ಮತ್ತು ೬೪. ೧೧೧೨]

೨. ಪದ್ಮಾವತೀ ಲಬ್ಧವರ ಪ್ರಸಾದಂ ರಾಜಾಧಿರಾಜ ಪೆರ್ಮ್ಮಾಡಿ ದೇವಂ ಶ್ರೀಮಚ್ಚಾಳುಕ್ಯ ವಿಕ್ರಮ [ಎ.ಕ. ೭-೧, ಶಿಕಾರಿಪುರ. ೧೧೫]

೩. ಪದುಮಾವತೀ ವರಪ್ರಸಾದ ಲಬ್ಧ ಸಿಂಹಲಾಂಚನ ವನರಾಜ [ಎ.ಕ. ೮(ರ) ಆಲೂರು. ೫ (೫ ಹಾ ೪೫) ೧೦೨೫. ಕಣತೂರು. ಪು. ೪೩೮]

೪. ಏಕಾಂಗ ವೀರನಸಹಾಯ ಶೌರ್ಯ ಸಾಹಸೋತ್ತುಂಗನಯ್ಯನ ಸಿಂಗಂ ಗೇಣಿಕಾರರ ದೇವ ನೊಂದಿರಿವಾತಂ ಲೋಕ ವಿಖ್ಯಾತಂ ಸಮ್ಯಕ್ತ್ವ ರತ್ನಾಕರಂ ಪದ್ಮಾವತೀಲಬ್ಧವರ ಪ್ರಸಾದಂ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ ಮಹಾಸಾಮಂತಂ ಮಾರ್ತಣ್ಡಯ್ಯಂ ತಮ್ಮ ಮುತ್ತಯ್ಯಂ ಮಾಡಿಸಿದ ಬಸದಿಯಂ ಪಡಿಸಲಿಸಿ ನಾಟಕ ಶಾಲೆಯಂ ಮಾಡಿಸಿ ತನ್ನ ಕೀರ್ತಿ ಶಿಳಾ ಸ್ತಂಭಮನಾಚಂದ್ರಾರ್ಕ್ಕ ತಾರಂಬರಂ ನಿಲಿಸಿದಂ [ಸೌ.ಇ.ಇ. ೧೧-೧, ೭೮. ೧೦೪೫. ಮುಗದ (ಧಾಜಿ/ತಾ)]- ಹೀಗೆಯೇ ಇನ್ನೂ ಹತ್ತಾಲು ಶಾಸನಗಳಲ್ಲಿ ಪದ್ಮಾವತಿ ದೇವಿಯ ಮಹಿಮೆಗೆ ಪಾತ್ರರಾದ ರಜರಾಣಿಯರ, ಮನೆತನಗಳ ಪ್ರಸ್ತಾಪಗಳು ಸಿಗುತ್ತವೆ [ನಾಗರಾಜಯ್ಯ, ಹಂಪ: ಸಾಂತರರು-ಒಂದು ಅಧ್ಯಯನ, ೧೯೯೭, ೨೪೩-೪೪].

ಇದೇ ರೀತಿ, ಜಿನಶಾಸನ ದೇವಿಯಾದ ಜ್ವಾಲಾಮಾಲಿನೀದೇವಿಯ ಮಹಿಮೆಯೂ ಸಕಷ್ಟು ಪ್ರಕಟವಾಗಿದೆ. ೮-೯ ನೆಯ ಶತಮಾನದ ವೇಳೇಗೆ ಜ್ವಾಲಾ ಮಾಲಿನಿಯನ್ನು ಅರಮನೆಗಳಲ್ಲೂ, ಮನೆದೇವರ ಗುಡಿಗಳಲ್ಲೂ ಪೂಜಿಸುತ್ತಿದ್ದ ರಜಮನ್ನೆಯರ ಉಲ್ಲೇಖಗಳು ಶಾಸನಗಳಲ್ಲಿ ಸಿಗುತ್ತವೆ. ಸಮಂತ ಭದ್ರಾಚಾರ್ಯರು (೫-೬ ಶ.) ಈ ದೇವಿಯ ಕೃಪೆಗೆ ಪಾತ್ರರಾಗಿದ್ದರೆನ್ನಲಾಗಿದೆ. ಆದಿಕವಿ ಪಂಪನು (೯೩೨) ವಿಕ್ರಮಾರ್ಜುನ ವಿಜಯದಲ್ಲಿ 'ಅಗ್ನಿಕುಂಡ ಸಂಜಾತೆ ದ್ರೌಪದಿ ಜ್ವಾಳಾಮಾಳಿನಿ ಯೊಗೆವಂತೊಗೆದ ಕೃಷ್ಣೆ' (೩-೩೨ ವ) ಎಂದು ಪ್ರಸ್ತಾಪಿಸಿದ್ದಾನೆ. ದ್ರವಿಳಗಣದ ಏಳಾಚಾರ್ಯನು (೭-೮. ಶ.) ಜ್ವಾಲಿನೀಕಲ್ಪ ಪರಂಪರೆಯನ್ನು ಪ್ರಾರಂಭಿಸಿದ್ದನು. ಪೊನ್ನಕವಿಯ (೯೬೫) ಗುರುವಾದ ಇಂದ್ರನಂದಿಯು (೮೬೦-೯೩೫) ಮಾನ್ಯಖೇಟದಲ್ಲಿ ಭೈರವ ಪದ್ಮಾವತೀಕಲ್ಪ ಮತ್ತು ಜ್ವಾಲಿನೀ ಕಲ್ಪ ಎಂಬ ಕೃತಿಗಳನ್ನು ರಚಿಸಿದ್ದನು. ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕು ಹಳೆಯ ಬೀಡು ಹತ್ತಿರವಿರುವ, ಜಾವಗಲ್ ಗ್ರಾಮದ ಚಂದ್ರನಾಥ ನಿಸಿದಿಗೆ ಶಾಸನವು ೧೦ ನೆಯ ಶ. ಕ್ಕೆ ಸೇರಿದ್ದೆಂಬ ಅಂಶ ಸಹಕಾರಿಯಾಗಿದೆ; ಈ ಹಳೆಯ ಕಾಲದ ಜಿನಾಲಯದಲ್ಲಿ ಜ್ವಾಲಾಮಾಲಿನೀ ದೇವಿಯ ಎರಡು ಲೋಹಮೂರ್ತಿಗಳಿವೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲಾಕಿನ ಗೇರು ಸೊಪ್ಪ (ಭಲ್ಲಾತಕೀ ಪುರ, ಕ್ಷೇಮಪುರ) ದ ಅಧಿದೇವತೆ ಜ್ವಾಲಾಮಾಲಿನೀ ದೇವಿಯೇ ಆಗಿದ್ದಳು. [ನಾಗರಾಜಯ್ಯ. ಹಂಪ: ಯಕ್ಷ ಯಕ್ಷಿಯರು: ೧೯೭೬: ೧೨೩-೨೪]. ಅಲ್ಲದೆ ಧಾರವಾಡ ಜಿಲ್ಲೆಯ ನವಿಲುಗುಂದದಲ್ಲಿದ್ದ, ಪ್ರಾಚೀನವಾದ ಜ್ವಾಳಾಮಳಿನೀ ದೇವಿಯ ಒಂದು ಸ್ವತಂತ್ರ ಬಸದಿಗೆ, ಇಡೀ ಜಾವೂರು ಎಂಬ ಹಳ್ಳಿಯನ್ನು ಸರ್ವನಮಶ್ಯವಾಗಿ ಬಿಟ್ಟು ಹೊಟ್ಟುದನ್ನು ತಿಳಿಸುವ ಮಹತ್ವದ ಶಾಸನವಿದೆ [ಸೌ.ಇ.ಇ. ೧೫, ೬೩೭. ಸು. ೧೩ ಶ. ಜಾವೂರು. ಪು. ೪೦೮]. ಈ ಎಲ್ಲ ಹಿನ್ನೆಲೆಯಿಂದ ಜ್ವಾಲಾಮಾಲಿನಿದೇವಿಯ ಕೆಲವು ಸಂಗತಿಗಳನ್ನು ಶಾಸನಗಳ ಆಧಾರದಿಂದ ಮುಂದೆ ವಿವೇಚಿಸಲಾಗುವುದು.

ಧಾರವಾಡಜಿಲ್ಲೆಯ ಗಾವರವಾಡ ಶಾಸನವು ಅತ್ಯಂತ ಮಹತ್ವದ ಶಾಸನಗಳಲ್ಲೊಂದು. ಅದರಲ್ಲಿ ಕೆಲವು ಚಾರಿತ್ರಿಕ ದಾಖಲೆಗಳು ಪರಿಶೀಲನ ಯೋಗ್ಯವಾಗಿವೆ. ಇದೊಂದು ಸುದೀರ್ಘ ಶಾಸನ. ಇದು ಕಲ್ಯಾಣ ಚಾಳುಕ್ಯರ ಭುವನೈಕಮಲ್ಲ ಇಮ್ಮಡಿ ಸೋಮೇಶ್ವರ ಚಕ್ರವರ್ತಿಯ ಆಳ್ವಿಕೆಗೆ ಸೇರಿದ ಶಾಸನ. ಇದರಲ್ಲಿ ಮಯೂರಾವತೀಪುರದ ಒಡೆಯನೂ, ಕತ್ತಲೆಕುಲಕ್ಕೆ ಸೇರಿದವನೂ ಆದ ಒಬ್ಬ ಕಾಟರಸನನ್ನು ಪರಿಚಯಿಸಲಾಗಿದೆ. ಶ್ರವಣಬೆಳಗೊಳದ ಚಿಕ್ಕಬೆಟ್ಟದ ಮೇಲೆ ಇರುವ ಕತ್ತಲೆ ಬಸದಿಯನ್ನು ಈ ಕತ್ತಲೆ ಕುಲದ ಕಾಟರಸನೋ ಅಥವಾ ಅವನ ವಂಶಸ್ಥರೊ ಕಟ್ಟಿಸಿರಬೇಕೆಂದು ಭಾವಿಸಲು ಅವಕಾಶವಿದೆ. ಗಾವರವಾಡದ ಶಾಸನ ದೊಡ್ಡದಿರುವುದರಿಂದ ಪ್ರಸ್ತುತ ಚರ್ಚೆಯ ಕಕ್ಷೆಗೆ ಒಳಪಡುವ ಕೆಲವು ಸಾಲುಗಳನ್ನಷ್ಟೆ ಇಲ್ಲಿ ಉದಾಹರಿಸುತ್ತೇನೆ:

೧. ಸ್ವಸ್ತಿ ಸಮಧಿಗತ ಪಂಚ ಮಹಾಶಬ್ಧ ಮಹಾಸಾಮನ್ತ ಭುಜವಳೋಪಾರ್ಜ್ಜಿತ ವಿಜಯ ಲಕ್ಷ್ಮೀಕಾಂತಂ ಸಮಸ್ತಾರಿ ವಿಜಯದಕ್ಷದಕ್ಷಿಣ ದೋರ್ದಣ್ಡಂ ಕತ್ತಲೆ ಕುಲ ಕಮಳ ಮಾರ್ತಣ್ಡಂ ಮಯೂರಾವತೀ ಪುರವಾರಾಧೀಶ್ವರಂ ಜ್ವಾಲನೀಲಬ್ಧವರ ಪ್ರಸಾದ ಕರ್ಪ್ಪೂರ ವರ್ಷಂ ಜಿನಧರ್ಮ್ಮ ನಿರ್ಮ್ಮಳಂ ನೆರೆ ಕಾಟಿಯಂಕಕಾರನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ ಮಹಾಸಾಮಂತ ಬೆಳ್ವಲಾಧಿಪತಿ ಭುಜಬಳ ಕಾಟರಸರುಂ [ಎ.ಇ. ೧೫, ೨೩. ೧೦೭೧-೭೨. ಗಾವರವಾಡ-ಅಣ್ಣಿಗೇರಿ. ಸಾಲು: ೪೪-೪೭].

ಈ ಶಾಸನದ ಮಹತ್ವವೆಂದರೆ ಶಾಂತಿನಾಥನೆಂಬ ಜೈನ ಕವಿಯು ಇದನ್ನು ಬರೆದಿರುವನೆಂಬುದು. ಈ ಶಾಂತಿನಾಥ ಕವಿಯು ಸುಕುಮಾರ ಚರಿತೆಯೆಂಬ ಚಂಪೂ ಕಾವ್ಯವನ್ನೂ, ಶಿಕಾರಿಪುರ ೧೩೬ ನೆಯ ಮಹತ್ವದ ಶಾಸನವನ್ನು ರಚಿಸಿ ಪ್ರಸಿದ್ಧನಾಗಿದ್ದಾನೆ [ಕಮಲಾ ಹಂಪನಾ: ಶಾಂತಿನಾಥ : ೧೯೭೨].

೨. ಇನ್ನೊಂದು ಶಾಸನ ಹನ್ನೆರಡನೆಯ ಶತಮಾನಕ್ಕೆ ಸೇರಿದ್ದಾಗಿದೆ. ಇದು ಸಹ ಧಾರವಾಡ ಜಿಲ್ಲೆಯ ಗದಗದಲ್ಲಿ ದೊರೆತಿದೆ. ಈ ಶಾಸನದ ಒಕ್ಕಣೆಯಿಂದ ಪ್ರಸ್ತುತಕ್ಕೆ ಉಚಿತವಾಗುವಷ್ಟನ್ನು ಮಾತ್ರ ಎತ್ತಿಕೊಳ್ಳಲಾಗಿದೆ:

ಸ್ವಸ್ತಿ ಸಮಧಿಗತ ಪಂಚಮಹಾಶಬ್ದಂ ಮಹಾಮಂಡಲೇಶ್ವರ ಆಸಂದಿ ಮಯೂರ ಪುರವರಾಧೀಶ್ವರ ವಿರೋಧಿ ಮಂಡಳಿಕನಗ ವಜ್ರದಂಡಂ ಸುಭಟ ಚೂಡಾಮಣಿ ವೈರಿಗಜ ಶೇಖರಿ ಸಹಜ ಮುರಾರಿ ಶ್ರೀಮಜ್ಜಿನ ಗಂಧೋದಕ ಪವಿತ್ರೀ ಕೃತೋತ್ತಮಾಂಗನ್ + ಏಕಾಂಗವೀರ ಪರನಾರೀ ದೂರ ವಿಬುಧಜನಸ್ತುತ್ಯ ಬೆಳ್ವೊಲಾ ದಿತ್ಯ ಜ್ವಾಳಿನೀದೇವೀ ಲಬ್ಧವರ ಪ್ರಸಾದಾಸಾದಿತ ಕಲಿಗಳಂ ಕಾವ ಮಹಾಮಂಡಳೇಶ್ವರಂ ರಾಯದೇವರಸರು [ಸೌ.ಇ.ಇ. ೧೫, ೨೧೪. ೧೧೯೯. ಗದಗ. ಪು. ೨೫೬–೫೭]

ಈ ಎರಡು ಉದಾಹೃತ ಶಾಸನಗಳಿಂದ ತಿಳಿದು ಬರುವ ವಿಚಾರಗಳೆಂದರೆ ಯಕ್ಷಿ ಜ್ವಾಳಾಮಾಲಿನೀ ದೇವಿಯು ಬೆಳ್ವೊಲ ನಾಡಿನೊಳಗ್ಗೆ ಪ್ರಸಿದ್ಧಳಾದ ದೇವತೆಯಾಗಿದ್ದಳು. ಆಕೆಯ ಅನುಗ್ರಹದಿಂದ ಕೆಲವರು ಮಹಾಮಂಡಳೇಶ್ವರರಾಗಿದ್ದರು. ಅವರಲ್ಲಿ ಕತ್ತಲೆಕುಲಜ ಕಾಟರಸನು ಹನ್ನೊಂದನೆಯ ಶತಮಾನದಲ್ಲಿಯೂ, ದೇವರಸನು ಹನ್ನೆರಡನೆಯ ಶತಮಾನದಲ್ಲಿಯೂ ಪ್ರಸಿದ್ಧರಾಗಿದ್ದರು.

ಬೆಳ್ವೊಲವೆಂಬ ಪ್ರದೇಶದ ವ್ಯಾಪ್ತಿ ವಿಶಾಲವಾದುದು. ಧಾರವಾಡಜಿಲ್ಲೆ ಗದಗ ತಾಲ್ಲೂಕಿನ ಇಟ್ಟಗಿಯ ಒಂದು ಶಾಸನದಲ್ಲಿ 'ಬಹುಧರ್ಮಧೇನು ನಿವಹಕ್ಕೆ ಆಡುಂಬೊಲಂ ಬೆಳ್ವಲಂ' ಎಂಬ ವರ್ಣನೆಯಿಂದೆ [ಎ.ಇ.೧೩, ೪–ಎ. ೧೧೧೨.]. ಬೆಳ್ವಲವು ವಿಖ್ಯಾತವಾದ ಕುಂತಳದೇಶದಲ್ಲಿಯೇ ಗಣ್ಯವೆನಿಸಿದ್ದ ನಾಡು. ಬೆಳ್ವಲ ವಿಷಯಕ್ಕೆ ನೆಲೆವೀಡು ಅಣ್ಣಿಗೆರೆ. ಬೆಳ್ವೊಲ ಮುನ್ನೂರು ಹಾಗೂ ಪುಲಿಗೆರೆ ಮುನ್ನೂರು ಸೇರಿ ಆದ ಎರಡರು ನೂರರ ಪ್ರದೇಶವು ಚರಿತ್ರೆಯಲ್ಲಿ ಹೆಸರಾಗಿದೆ.

ಗಂಗರು, ರಟ್ಟರು, ಚಾಲುಕ್ಯರು ಈ ಭಾಗವನ್ನು ಆಳುತ್ತಿದ್ದ ಅವಧಿಯ ಉದ್ದಕ್ಕೂ, ಸುಮಾರು ಆರುನೂರು ವರ್ಷಗಳವರೆಗೆ ಸತತವಾಗಿ, ಈ ಹರವಾದ ನೆಲಹೊಲ ಬಯಲು ಅಷ್ಟೂ ಜೈನ ಕೇಂದ್ರವಾಗಿ ವಿಜೃಂಭಿಸಿತು. ಬೆಳ್ವಲ ಮುನ್ನೂರರಲ್ಲಿ ರಾಜಧಾನಿ ಪಟ್ಟಣ ಅಣ್ಣಿಗೇರಿಯು ಬಾದಾಮಿ ಚಾಲುಕ್ಯರ ಕಾಲಕ್ಕಾಗಲೇ ಪ್ರಸಿದ್ಧವಾದ ಜೈನ ಕ್ಷೇತ್ರ ವಾಗಿತ್ತೆಂಬುದಕ್ಕೆ ಶಾಸನಗಳ ಆಧಾರವಿದೆ [ಸೌ.ಇ.ಇ. ೧೧-೧, ೫.೭೫೦-೫೨. ಅಣ್ಣಿಗೆರೆ]. ಅನಂತರ ರಾಷ್ಟ್ರಕೂಟರ, ಕಲ್ಯಾಣಿ-ಚಾಳುಕ್ಯರ, ಹೊಯ್ಸಳರ ಕಾಲದಲ್ಲಿಯೂ ಅಣ್ಣಿಗೆರೆಯು ಬೆಳ್ವೊಲದ ರಾಜಧಾನಿ ಮಹಾನಗರವಾಗಿಯೇ ಮುಂದುವರಿಯಿತು. ಗಂಗರ ಪೆರ್ಮಾಡಿ ಬೂತುಗನು ಇಲ್ಲಿ ಪೆರ್ಮಾಡಿ ಬಸದಿಯನ್ನು ಕಟ್ಟಿಸಿದನು ಮತ್ತು ಆ ದೇವಾಲಯವನ್ನು ಭುವನೈಕಮಲ್ಲನು ಧವಳಿತ ಉತ್ತುಂಗ ತಳತರಂಗವಾಗಿ ಮಾಡಿಸಿದನು [ಸೌ.ಇ.ಇ. ೧೧-೧, ೧೦೩. ನಂದವಾಡಿಗೆ. ಸು. ೧೦೬೫].

ಬೆಳ್ವೊಲ ನಾಡಿನಲ್ಲಿ ಅಣ್ಣಿಗೆರೆಯಲ್ಲದೆ ಇಟಗಿ, ಕುಕನೂರು-೩೦, ಕುಂದ ಗೋಳ, ಚಿಂಚಲಿ, ಗದಗ, ನರಗುಂದ, ನರೇಗಲ್ಲ-೧೨, ಮುಳಗುಂದ-೧೨, ರೋಣ, ಲಕ್ಕುಂಡಿ, ಶಿರೂರ, ಹುನಗುಂದ-೩೦ (ಪೊನ್ನುಗುಂದ)-ಮೊದಲಾದ ಸ್ಥಳಗಳು ಆಧಾರಸ್ತಂಭವೆನಿಸಿದ್ದುವು. ಧಾರವಾಡಜಿಲ್ಲೆ, ಬೆಳಗಾವಿಜಿಲ್ಲೆಯ ರಾಮದುರ್ಗ ಮತ್ತು ಸೌದತ್ತಿ ತಾಲ್ಲೂಕು ಭಾಗಗಳು, ಬಿಜಾಪುರ ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲ್ಲೂಕು-ಈ ಜಿಲ್ಲೆ-ತಾಲ್ಲೂಕುಗಳ ಬಹುಮಟ್ಟಿನ ಮುಖ್ಯ ಹಳ್ಳಿಗಳನ್ನು ಒಳಗೊಂಡ ಹರಹಿನ ನೆಲವೆಲ್ಲವೂ ಬೆಳ್ವಲ ಸೀಮೆಯಾಗಿ ಸೇರಿತ್ತು. ದಾನಚಿಂತಾಮಣಿ ಅತ್ತಿ ಮಬ್ಬೆಯು ಈ ಬೆಳ್ವೊಲ ನಾಡಿನ ಮಹಾನ್ ಸ್ತ್ರೀ ರತ್ನ ಎಂಬುದನ್ನು ನೆನೆಯಬೇಕು. ಆದಿಪಂಪನು ಅಣ್ಣಿಗೆರೆಯಲ್ಲಿ ಹುಟ್ಟಿದವನು. ಒಂದನೆಯ ನಾಗವರ್ಮ, ಶ್ರೀಧರ (ಜಾತಕತಿಲಕ) , ನಯಸೇನ (ಧರ್ಮಾಮೃತ), ವಿಜಯಣ್ಣ (ದ್ವಾದಶಾನುಪ್ರೇಕ್ಷೆ) ಮೊದಲಾದ ಸರಸ್ವತಿಯ ವರಪುತ್ರರು ಬೆಳ್ವಲ ಪ್ರದೇಶದ ರತ್ನಗಳು ಇವುಗಳಿಂದ ನಿಚ್ಚಳವಾಗುವಂತೆ ಬೆಳ್ವಲವು ಬಸದಿಗಳು ಬೀಡಾಗಿ ಜೈನಧರ್ಮದ ಹಬ್ಬುವಿಕೆಗೆ ಇಂಬಾಗಿತ್ತು.

ಗದಗ–ಗಾವರವಾಡ ಶಾಸನಗಲ ಆಧಾರದಿಂದ ಗ್ರಹಿಸಬಹುದಾದ ಅರ್ಥ ಪ್ರತೀತಿಗೆ ಈ ಭೌಗೋಳಿಕ–ಚಾರಿತ್ರಿಕ ಹಿನ್ನೆಲೆಯನ್ನೂ ಅವಶ್ಯ ಅಳವಡಿಸಿಕೊಂಡೇ ತೀರ್ಮಾನವನ್ನು ಕೈಗೊಳ್ಳಬೇಕು. ಅಣ್ಣಿಗೆರೆ, ಮುಳುಗುಂದ, ಲಕ್ಕುಂಡಿ ಮೊದಲಾದ ಸ್ಥಲಗಳು ಜೈನ ಕೇಂದ್ರ ಹಾಗೂ ತೀರ್ಥ ಸ್ಥಳಗಳಾಗಿದ್ದು ಅನೇಕ ಜೈನಗೃಹಗಳನ್ನು ಒಳಗೊಂಡು ಅಹಿಂಸೆಯ ಸಂದೇಶವನ್ನು ಬಿತ್ತರಿಸಿದುವು. ಇಲ್ಲಿನ ಜೈತ್ಯಾಲಯ ಮಂದಿರಗಳಲ್ಲಿನ ಜಿನಶಾಸನದೇವತೆಗಳ ಮೂರ್ತಿಗಳು ಪ್ರಭಾವಶಾಲಿಯಾಗಿ ಪೂಜೆ ಗೊಳ್ಳುತ್ತಿದ್ದುವು. ಕಕ್ಕುಂಡಿಯ ಬ್ರಹ್ಮ ಜಿನಾಲಯದ ಆವರಣದೊಳಗಿದ್ದು ಪದ್ಮಾವತಿ ಗುಡಿಯು ಪ್ರಸಿದ್ಧವಾಗಿತ್ತು [ಸೌ.ಇ.ಇ. ೧೧, ೫೨.೧೦೦೭. ಲಕ್ಕುಂಡಿ (ಧಾಜಿ/ಗದಗ ತಾ) ಅದರಂತೆಯೇ ಅಣ್ಣಿಗೇರಿ ಮತ್ತು ಮುಳ್ಗುಂದಗಳಲ್ಲಿ ಇದ್ದ ಬಸದಿಗಳಲ್ಲಿಯೂ ಜ್ವಾಳಾಮಾಳಿನೀ ದೇವಿಯಕ್ಷಿಯ ಗುಡಿಗಳೂ ಮೂರ್ತಿಗಳು ಇದ್ದಿರಬೇಕು. ಈ ಶಾಸನದೇವಿಯ ಮಹಿಮೆಯು ಮನೆಮಾತಾಗಿ ರಾಜ ಪ್ರಜೆಗಳೆಲ್ಲರ ಮೇಲೆ ತನ್ನ ಪ್ರಭಾವ ಬೀರಿದ್ದಿರಬೇಕು. ಈಗಿನ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ (ಸಿಂಹನಗದ್ದೆ–ಎನ್. ಆರ್. ಪುರ) ಕ್ಷೇತ್ರವು ಜ್ವಾಳಾ ಮಾಳಿನೀ ದೇವಿಯು ಇರುವ ದೇವಾಲಯವು ತುಂಬ ಹೆಸರುವಾಸಿಯಾಗಿದೆ; ಈ ಗುಡಿಯು ವಿರಾಜಮಾನಗೊಂಡು ಪ್ರಸಿದ್ಧಿಯನ್ನು ಪಡೆಯುವುದಕ್ಕೂ ಮೊದಲು, ಶತಮಾನಗಳ ಹಿಂದೆ, ಬೆಳ್ವಲ ನಾಡಿನಲ್ಲಿ ಈ ಜ್ವಾಳಾಮಾಳಿನಿ ದೇವಿಯ ಮಹಿಮೆಯು ಮನ್ನಣೆಹೊಂದಿತ್ತು, ಎಂಬುದಕ್ಕೆ ಈ ಸಂಪ್ರಬಂಧದಲ್ಲಿ ಉದಾಹರಿಸಿರುವ ಎರಡು ಶಾಸನ ಭಾಗಗಳು ಸ್ಪಷ್ಟದಾಖಲೆಗಳು. ಮೇಲ್ಕಂಡ ಎರಡು ಶಾಸನಗಳಲ್ಲಿ ಪ್ರಸ್ತಾಪಗೊಂಡಿರುವ 'ಮಯೂರಪುರ' ವು ಯಾವುದು ಏನು ಎತ್ತ ಎಂಬ ಬಗ್ಗೆ ಇದುವರೆಗೆ ಚರ್ಚೆಗಳಾಗಿಲ್ಲ. ಇದೇ ಮೊದಲನೆಯ ಬಾರಿಗೆ ನಾನಿಲ್ಲಿ, ಇದರ ಸಂಬಂಧವಾಗಿ ಕೆಲವು ಹೊಸಮಾಹಿತಿಗಳನ್ನು ಅಳವಡಿಸಿಕೊಂಡು, ಜಿಜ್ಞಾಸೆ ನಡಸಿದ್ದೇನೆ ಮತ್ತು ಈ 'ಮಯೂರಪುರ' ಎಂಬುದು ಕನ್ನಡದ ಸ್ಥಳನಾಮವಾಚಕದ ಸಂಸ್ಕೃತೀಕರಣ ಗೊಂಡಿರುವ ಶಬ್ದರೂಪವೆಂದು ತೋರಿಸಿದ್ದೇನೆ.

ಕನ್ನಡ ಶಾಸನಗಳ ಅಧ್ಯಯನ ಕಾರರಿಗೆ ನವಿಲು ಸಂಬಂಧವಾದ ಊರಿನ ಹೆಸರುಗಳು ಚಿರಪರಿಚಿತ. ಶಿವಮೊಗ್ಗ ಜಿಲ್ಲೆಯಲ್ಲಿ ಶಿಕಾರಿ ಪುರ ತಾಲ್ಲೂಕಿಗೆ ಸೇರಿದ ನವಿಲೆಯಿದೆ [ಎ.ಕ. ೭-೧, ಶಿಕಾರಿ, ೨೦. ೧೦೩೨]. ಆದರೆ ಪ್ರಕೃತ ಚರ್ಚಿಸುತ್ತಿರುವ ಮಯೂರ ಪುರವು ಬೆಳ್ವೊಲ ನಾಡಿಗೆ ಸೇರಿದ್ದು, ಅದರಿಂದ ಶಿವಮೊಗ್ಗ ಜಿಲ್ಲೆಯ ನವಿಲಿಗೆ ಸಂಬಂಧಿಸಿದ್ದಲ್ಲ. ರಾಯಚೂರ ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲೊಂದು ನವಿಲೆಯಿದೆ [ಸೌ.ಇ.ಇ. ೧೧-೧. ೧೦೩. ೧೦೬೮] . ಆದರೆ ರಾಯೂಚೂರು ಜಿಲ್ಲೆಯಲ್ಲಿ ಯಲಬುರ್ಗಿ ತಾಲ್ಲೂಕು ಮಾತ್ರ ಬೆಳ್ವೊಲ ಪ್ರದೇಶಕ್ಕೆ ಒಳಪಟ್ಟಿತ್ತು. ಅದರಿಂದ ಅದೂ ಇಲ್ಲಿಗೆ ಅನ್ವಯಿಸುದು. ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ಸುತ್ತಮುತ್ತಲ ಪ್ರದೇಶಕ್ಕೆ ಹನ್ನೊಂದನೆಯ ಶತಮಾನದಲ್ಲಿ 'ನವಿ(ವ)ಲೆ ನಾಡು ಪ್ರಾಂತ' ಎಂದು ಕರೆಯಲಾಗಿದೆ [ಎ.ಕ.೩ (ಪ.) ೬೦. ೧೦೫೭.; ಎ.ಇ. ೬, ೨೧೬.೧೦೫೭.; ಎ.ಕ. ೬, ೧೦೩. ಸು. ೯೧೦]. ಈ ಭಾಗವು ಪ್ರಾಚೀನ ಪುನ್ನಾಡು ದೇಶವೆನಿಸಿದ್ದು ಜೈನರ ಕೆಂದ್ರವಾಗಿತ್ತು. ಈಗಿನ ಕಿತ್ತೂರು (ಕೀರ್ತಿಪುರ) ಪುನ್ನಾಡಿಗೆ ರಾಜಧಾನಿಯಾಗಿತ್ತು. ಆದರೆ ಇಲ್ಲಿನ ನವಿಲೆ ನಾಡು ಪ್ರಾಂತ ಕೂಡ ಬೆಳ್ವಲ ಪ್ರದೇಶಾಂತರ್ಗತವಾಗಿರಲಿಲ್ಲವಾದ್ದರಿಂದ ಪ್ರಸ್ತುತ ವಿವೇಚನೆಯ ಕಕ್ಷೆಗೆ ಅಳವಡುವುದಿಲ್ಲ.

ಧಾರವಾಡ ಜಿಲ್ಲೆಯ ನವಿಲುಗುಂದವು ಬೆಳ್ವಲನಾಡಿಗೆ ಒಳಪಟ್ಟಿತ್ತು. 'ನವಿಲುಗುಂದ ನಾಲ್ವತ್ತು' ಪ್ರದೇಶವನ್ನು ಶಾಸನ ಉಲ್ಲೇಖಿಸಿದೆ [ಇ.ಆ. ೧೨, ೯೭. ೧೧೮೭]. ಅಲ್ಲದೆ ನವಿಲ್ಗಂದ ಪುರಂ- ಎಂಬ ಸ್ಥಳನಾಮರೂಪವೂ ಶಾಸನದಲ್ಲಿದೆ [ಸೌ.ಇ.ಇ. ೧೧-೧, ೪೫. ೯೮೦]. ನವಿಲ್ಗುಂದದ ಕಡೆಯ ಅಳತೆಯ ಕೋಲನ್ನು 'ನವಿಲ್ಗುಂದ ಗೋಲು' ಎಂದು ಶಾಸನ ನಮೂದಿಸಿದೆ [ಸೌ.ಇ.ಇ. ೨೦, ೨೪೮. ೧೨೨೮]. ಇದೇ ಧಾರವಾಡ ಜಿಲ್ಲೆಯ ನವಿಲೂರು ಎಂಬುದು ಬಾದಾಮಿ ಚಾಳುಕ್ಯರ ಕಾಲದಿಂದಲೂ ಏಳು-ಎಂಟನೆಯ ಶತಮಾನದಿಂದಲೂ, ಜೈನ ಕ್ಷೇತ್ರವೆಂದು ಪ್ರಸಿದ್ಧವಾಗಿದೆಯಲ್ಲದೆ ಸುಮಾರು ೧೨೯೦ ವರ್ಷಗಳಿಂದ ಈ ನವಿಲೂರು ಜೈನತೀರ್ಥಸ್ಥಳ ಕೇಂದ್ರವಾಗಿ ಬೆಳೆದು ಬಂದಿದೆಯೆಂದು ಶಾಸನಗಳು ಸಾರಿ ಹೇಳುತ್ತಿವೆ:

೧. ನವಿಲೂರ ನಾಟಿಗ್ಗಾಮುಣ್ಡರು ಬೆಳ್ಗೊಳದ ಗೋವಿಂದ ಪಾಡಿಲು

[ಎ.ಕ. ೨(ಪ.) ೩೮ (೩೫). ೮೦೦]

೨. ನವಿಲೂರು ಗಣದ ಬಾಳಂಬಾ ಕನ್ತಿಯರ ಮಗಳ್ ವಿಜಕ್ಕಂ [ಎ.ಕ. ೬, ಕಡೂರು ೧೫೯. ೯೬೧. ಸಾಲು: ೧೨]

೩. ಸ್ವಸ್ತಿ ಶ್ರೀಮತ್ ನವಿಲೂರ್+ಸಂಘದ ಪುಷ್ಪಸೇನಾಚಾರಿಯ ನಿಸಿಧಿಗೆ [ಎ.ಕ.೨(ಪ.). ೧೧೮. ಅತೇದಿ. ಸಾಲುಃ ೧]

೪. ನವಿಲೂರ ಸಿರಿಸಂಘ ದಾಜಿಗಣದಾ ರಾಜ್ಞೀಮತಿಗನ್ತಿಯರ್ [ಎ.ಕ.೨ (ಪ.) ೧೧೨(೯೭). ೭ಶ.]

೫. ನವಿಲೂರ ಸಂಘದ ಮಹಾನನ್ದಾಮತೀ ಗನ್ತಿಯಾರ್ [ಅದೇ, ೧೧೭ (೧೦೨). ೭ಶ.]

ಮೇಲಿನ ಶಾಸನ ಪ್ರಯೋಗಗಳಿಂದ ಸಾಬೀತು ಆಗುವಂತೆ, ನವಿಲೂರು ಜೈನ ಕೇಂದ್ರವಾಗಿತ್ತು. ಅಲ್ಲದೆ ನವಿಲೂರು ಎಂಬ ಹೆಸರಿನಿಂದ ಒಂದು ಜೈನ ಗಣವೂ, ಸಂಘವೂ, ಪ್ರಚಾರ ಪಡೆದವು ಎಂಬುದು ವಿಶೇಷ ಗಮನಿಕೆಗೆ ಪಾತ್ರವಾಗುತ್ತದೆ. ಈ ಕಾರಣಗಳಿಂದ ಧಾರವಾಡ ಜಿಲ್ಲೆ-ತಾಲ್ಲೂಕಿಗೆ ಸೇರಿದ ಈ ನವಿಲೂರು ಬೆಳ್ವಲ ಪ್ರದೇಶದ ಪ್ರತಿಷ್ಠಿತ ಕಂಪಣ ಕೇಂದ್ರವಾಗಿತ್ತು. ಈ ನವಿಲೂರು ಎಂಬ ಊರಿನ ಹೆಸರನ್ನು ಸಂಸ್ಕೃತಭಾಷೆಗೆ ಅಳವಡಿಸಿ, ಸಂಸ್ಕೃತೀಕರಣಗೊಳಿಸಿ "ಮಯೂರಪುರ" ಎಂದು ಮಾಡಿದೆಯೆಂದು ಊಹಿಸುವುದು ಸಂಭಾವ್ಯವೆನ್ನಬೇಕು. ಈ ಪ್ರಮೇಯವನ್ನು **(Hyporthesis)** ಬೆಂಬಲಿಸುವ ಸಲುವಾಗಿ ಶ್ರವಣಬೆಳುಗೊಳದ ಎರಡು ಶಾಸನಗಳು ಸಿದ್ಧವಾಗಿವೆ. ಅ ಎರಡೂ ಶಾಸನಗಳ ಸ್ವಾರಸ್ಯ ಮತ್ತು ಪ್ರಸ್ತುತ ಪ್ರಮೇಯಕ್ಕೆ ಸಹಾಯಕ ಅಂಶವೆಂದರೆ ಅವುಗಳಲ್ಲಿ ಒಂದು ಕನ್ನಡದಲ್ಲೂ, ಇನ್ನೊಂದು ಸಂಸ್ಕೃತದಲ್ಲೂ ಇರುವುದು. ಅಷ್ಟೇ ಅಲ್ಲದೆ ಒಂದರಲ್ಲೇ ಪೂರ್ವಾರ್ಧ ಕನ್ನಡದಲ್ಲೂ,

ಉತ್ತರಾರ್ಧವು ಸಂಸ್ಕೃತದಲ್ಲೂ ರಚಿತವಾಗಿದೆ. ಕನ್ನಡದಲ್ಲಿ ಇರುವ ಮೊದಲಭಾಗದಲ್ಲಿ ಇದನ್ನು ನವಿಲೂರು ಸಂಘಾ ಎಂದೂ, ಸಂಸ್ಕೃತ ರಚನೆಯಿರುವ ಎರಡನೆಯ ಭಾಗದಲ್ಲಿ 'ಮಯೂರ ಸಂಘ' ಎಂದೂ ಸ್ಪಷ್ಟವಾಗಿದೆ [ಎ.ಕ.೨(ಪ.). ಶ್ರಬೆ ೧೩೨ (೧೧೪) ಮತ್ತು ಅದೇ, ೧೨೩(೧೦೮)]. ಅಲ್ಲದೆ ಇದರಲ್ಲಿ 'ಮಯೂರ ಗ್ರಾಮಸಂಘಸ್ಯ' ಎಂದು ಕನ್ನಡ ಅಂಕಿತ ನಾಮವನ್ನು ಸಂಸ್ಕೃತಕ್ಕೆ ಪರಿವರ್ತಿಸಿರುವುದು ನಿಚ್ಚಳವಾಗಿದೆ. ಆದ್ದರಿಂದ 'ಮಯೂರ ಪುರ' ಎಂಬುದು 'ನವಿಲೂರು' ಎಂಬ ಕನ್ನಡ ಸ್ಥಳವಾಚಿ ಮೂಲದ್ದೆಂದು ತೀರ್ಮಾನಿಸಿ, ಪ್ರಮೇಯವನ್ನು ಪಕ್ಕಾ ತೀರ್ಮಾನವಾಗಿ ಒಪ್ಪಬಹುದೆನಿಸುತ್ತದೆ.

ಆದರೆ ಈ ತೀರ್ಮಾನವನ್ನು ಅಖೈರಾಗಿ ಒಪ್ಪುವುದಕ್ಕೆ ಮೊದಲು ದೊರೆಯುವ ಇನ್ನಷ್ಟು ಸಾಮಗ್ರಿಯನ್ನೂ ಸಹ ಪರಿಶೀಲಿಸಬೇಕಾಗುತ್ತದೆ. ಏಕೆಂದರೆ ಈ ನವಿಲೂರು ಬೆಳ್ವಲದಲ್ಲೇ ಇದ್ದರೂ, ಜೈನ ಕೇಂದ್ರ ಕೂಡ ಆಗಿದ್ದರೂ, ಮಯೂರ ಗ್ರಾಮ ಸಹ ಆಗಿದ್ದರೂ, ಮಹಾಸಾಮಂತನಾದ ರಾಯದೇವರಸನೂ, ಮಹಾಮಂಡಲೇಶ್ವರ ಕಾಟರಸನೂ ಇದ್ದ ಮಯೂರಪುರವು ಇದೇನೆ ಹೌದು ಅಲ್ಲವೊ ಎಂದು ಪರಾಮರ್ಶಿಸಿಬೇಕಾಗಿದೆ. ಆ ರೀತಿಯ ಪರೀಕ್ಷೆಗೆ ತೊಡಗಿದಾಗ ಮೇಲಿನ ಪ್ರಮೇಯ ನಿಲ್ಲುವುದಿಲ್ಲವೆಂಬುದು ಸ್ವಾರಸ್ಯವಾದ ಬೆಳವಣಿಗೆಯಾಗಿದೆ. ಇನ್ನಷ್ಟು ಉಪಲಬ್ಧ ಶಾಸನ ಸಾಮಗ್ರಿಯಿಂದ ಅಂತಿಮವಾಗಿ ತಿಳಿದುಬರುವ ವಾಸ್ತವ ಸಂಗತಿಯೆಂದರೆ. ದೇವರಸನೂ ಕಾಟರೆಸಾದಿಗಳೂ ಇದ್ದುದು ಈ ನವಿಲೂರು–ಮಯೂರಪುರವಲ್ಲ ಎಂಬುದು.

ಕಾಟರಸ–ದೇವರಸಾದಿ ಅಧಿಕಾರಿಗಳು ಆಳಿದ್ದು ನವಿಲೂರಿನಿಂದ ಅಲ್ಲ, ನವಿಲ್ಗುಂದದಿಂದ ಎಂಬುದಾಗಿ ತಿಳಿಸುವ ಆಧಾರಗಳು ಶಾಸನಗಳಲ್ಲಿವೆ. ಈಗಿನ ನವಿಲ್ಗುಂದವೂ ಬಾದಾಮಿ ಚಾಳುಕ್ಯರ, ಗಂಗರ ಮತ್ತು ರಾಷ್ಟ್ರಕೂಟರ ಆಡಳಿತದ ಅವಧಿಯಲ್ಲಿಯೇ ಪ್ರಸಿದ್ಧ ಜೈನ ಮುಖ್ಯ ಸ್ಥಳವಾಗಿತ್ತು. ಗದಗದ ಒಂದು ಶಾಸನವು [ಬಾ.ಕ. ೧೯೨೬-೨೭.೬೧೧೯] ಈ ನವಿಲ್ಗುಂದವು

ಹೇಗೆ ಒಂದು ದೊಡ್ಡ ಜೈನ ಕೇಂದ್ರವಾಗಿತ್ತೆಂಬುದನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದೆ. ಆ ಶಾಸನದಿಂದ ಇಲ್ಲಿಗೆ ಅಗತ್ಯವಾಗಿ ಬೇಕಾದ ಹೃದಯಭಾಗವನ್ನು ಉದಾಹರಿಸಿ ವಿವೇಚಿಸಬಹುದು. ನವಿಲ್ಗುಂದವು ಹಲವು ಜಿನ ಭವನಗಳಿಂದ ಕೂಡಿತ್ತು.

ತೀರ್ಥಂಕರ ನಿವಾಸದೆ ಶೋಭಾಕರ ಯಕ್ಷ ಯಕ್ಷಿಣೀಗೃಹ ಪರಿಕರದೆ
ಜ್ವಾಳಿನೀ ಸಮಗ್ರಗುಣಮಣಿ
ಮಾಳಿನೀ ಸಾಧಕ ವಿನಯ ಸುಬ್ರತಿ ಜನತಾ
ಪಾಳಿನೀ ದುರಿತಮಳಪ್ರ
ಕ್ಷಾಳಿನೀ ಸಂವಿದೆಯೆನಿಪ್ಪಳಂತಾ ಪುರದೊಳ್ ||

ಎಂಬುದಾಗಿ ವರ್ಣನೆಯಿದೆ. ನವಿಲ್ಗುಂದವು ಜ್ವಾಳಾಮಾಳಿನಿಯನ್ನು ಮುಖ್ಯಸ್ಥಳ ದೇವತೆಯನ್ನಾಗಿ ಪಡೆದಿತ್ತು. ಕತ್ತಲೆಕುಲ ಎಂಬ (ಕಳ್ತಲೆಗ) ಮನೆತನಕ್ಕೆ ಸೇರಿದ ಕೆಂಚಮ(ನ್) ಎಂಬಾತನು ಅಂತಾ ಜ್ವಾಳಿನೀ ದೇವಿಯಲ್ಲಿಗೆ ಆರಾಧಿಸಲೆಂದೆ ಬಂದು, ತನ್ನ ಭಕ್ತಿ ನಿರ್ಭರ ಪೂಜೆಯನ್ನು ಸಲ್ಲಿಸಿದನು–ನಿನ್ನಂ ಬಲಿಗೊಂಡೆನ್, ಅಂದರೆ ನಿನ್ನನ್ನು ಪೂಜಿಸಿದ್ದೇನೆ–ಆರಾಧಿಸಿದ್ದೇನೆ ಎಂದು ನಿವೇದಿಸಿಕೊಂಡನು. ಇಮ್ಮಡಿ ನಾಗವರ್ಮಕೃತ ಅಭಿಧಾನ ರತ್ನಾಮಾಲ ಕರ್ಣಾಟಕ ಟೀಕೆಯಲ್ಲಿ ಅರ್ಚಾ, ಪೂಜಾ, ಸಪರ್ಯಾ, ಉಪಹಾರ, ಬಲಿಃ ಈ ಅಯ್ದು ಪೂಜೆ ಎಂಬ ಅರ್ಥದ ಶಬ್ಧಗಳೆಂದು ತಿಳಿಸಿದ್ದಾನೆ.

ನವಿಲ್ಗುಂದದ ಜ್ವಾಳಾಮಾಳಿನೀ ದೇವಿಯು ಕೆಂಚಮನನ್ನು ಅನುಗ್ರಹಿಸಿದ ಳೆಂದೂ, ಆತನಿಗೆರ್ ಪ್ರಸನ್ನಳಾಗಿ ವರಗಳನ್ನಿತ್ತಳೆಂದೂ, ತನ್ನ ಇಚ್ಛಿತಾರ್ಥಸಿದ್ದಿಯ ಆ ವರದಿಂದ ದೇಹಬಲವೂ ಆತ್ಮ ಬಲವೂ ಹೆಚ್ಚಿದ ಕೆಂಚನೃಪನು ಎದುರಾಳಿಗಳನ್ನು ಸದೆ ಬಡಿದು ವಿಜಯಿಯಾದನು ಎಂದು ಶಾಸನದಾಖಲಿಸಿದೆ, ಜ್ವಾಳಾಮಾಳಿನೀ ದೇವಿಯಿಂದ, ಆಕೆಯ ಭಕ್ತರಾದ

ಕತ್ತಲೆ ದಾಖಲಿಸಿದೆ. ಜ್ವಾಳಾಮಳಿನೀದೇವಿಯಿಂದ, ಆಕೆಯ ಭಕ್ತರಾದ ಕತ್ತಲೆ ಕುಲದರಸುಗಳ ಆಳಿಕೆಯಿಂದ ನವಿಲ್ಗುಂದವು ದೊಡ್ಡ ಹೆಸರನ್ನು ಪಡೆಯಿತು.

ಶೌರ್ಯನಿಧಿಯಾದ ಕೆಂಚನು ಬೆಳ್ವೊಲ ನಾಡೆಲ್ಲವನ್ನೂ ಆಳುವ ಮಾಂಡಲಿಕನೂ ಆದನು, ಜ್ವಾಳಿನೀದೇವಿಯ ಅನುಗ್ರಹದಿಂದ–

ಇನ್ನಿವಗಿದು ಸಂಪದಮಂ
ತನಗಿತ್ತಾ ಜ್ವಾಳಿನೀ ಮಹಾದೇವಿಗೆ ಚೆ
ಲ್ವೆ ನಿಪಾವಾಸಮನೆತ್ತಿಸಿ
ಯನೇಕ ವೃತ್ತಿಗಳನಿತ್ತನಾ ಕೆಂಚರಸಂ ||

–ಕಳ್ತಲೆ ಕುಲಕ್ಕೆ ಸೇರಿದ ಪ್ರಚಂಡ ಮಂಡಲಿಕ ಕೆಂಚನೃಪನು ಜ್ವಾಳಿನೀದೇವಿಯ ಪರಮಭಕ್ತನು. ತನ್ನ ಕುಲದೇವತೆಯಾದ ಜ್ವಾಳಿನೀ ಮಹಾದೇವಿಗೆ ಆತನು ಒಂದು ದೇವಸ್ಥಾನವನ್ನು, ಹತ್ತನೆಯ ಶತಮಾನದಲ್ಲಿ, ತನ್ನ ನೆಲೆವೀಡು ಬೀಡೂ ಇದ್ದುದ ರಿಂದ, ನವಿಲ್ಗುಂದದಲ್ಲಿ ಕಟ್ಟಿಸಿದನು. ಈಗ ನನ್ನ ಸಂಶೋಧನೆಯ ಪ್ರಕಾರ ಕರ್ನಾಟಕದ ದಲ್ಲಿ ಮತ್ತು ಪ್ರಯಃ ಇಡೀ ಭಾರತದಲ್ಲಿಯೇ, ಜ್ವಾಳಾಮಾಳಿನೀ ಶಾಸನದೇವಿಗೆ ಕಟ್ಟಿಸಿಕೊಟ್ಟ ಮೊಟ್ಟಮೊದಲನೆಯ ಸ್ವತಂತ್ರ ದೇವಾಲಯವು ಇದೇ ಆಗಿದೆ. ಅದರಿಂದ ಕೆಂಚನೃಪನು ಈ ಜ್ವಾಳಿನೀ ಮಹಾದೇವಿಗೆ ಎತ್ತಿಸಿದ (ಕಟ್ಟಿಸಿದ) ಈ ಚೆಲ್ವೆನಿಪ ಆವಾಸಕ್ಕೆ, ಸುಂದ್ರ ಬಸದಿಗೆ, ಆತನು ಅನೇಕ ವೃತ್ತಿ (ದತ್ತಿ) ಗಳನ್ನು ಇತ್ತನೆಂಬುದನ್ನೂ ಗಮನಿಸಬೇಕು. ಈ ಕೆಂಚರಸನವಂಶದವನೇ ಆದ ಕಾಟರಸನು ನವಿಲ್ಗುಂದದಲ್ಲ್ಲಿ ‘ತ್ರಿಭುವನ ತಿಳಕಮೆನಿಪ್ಪ ಪೆಸರಜಿನಮಂದಿರ’ ವನ್ನೂ ಮಾಡಿಸಿದನು. ಗಾವರವಾಡದ ಶಾಸನೋಕ್ತ ಕಾಟರಸನೂ, ಗದಗ ಶಾಸನೋಕ್ತ ಕೆಂಚರಸ್ಯಾದರೂ ಒಂದೇ ‘ಕತ್ತಲೆ ಕುಲ’ ವೆಂಬ ವಂಶಕ್ಕೆ ಸೇರಿದವರೆಂದು ಸಂಶೋಧನೆಯಿಂದ ಖಚಿತ ಪಡಿಸಿದ್ದೇನೆ.

ಅಲ್ಲದೆ ಮುಳ್ಗುಂದದ [ಎ.ಇ. ೧೬.೫೩. ೧೦೫೩] ಶಾಸನದಲ್ಲಿ ಹೇಳಿರುವ ಕೆಂಚರಸನೂ ಗದಗ–ಗಾವರವಾಡ ಶಾಸನದ ಕೆಂಚನೃಪನೂ ಅಭಿನ್ನರೆಂದೇ ತಿಳಿಯ ಬೇಕು. ಇದೇ ಕುಲಕ್ಕೆ ಸೇರಿದ ಇಮ್ಮಡಿ–ರಾಯ ದೇವರಸನು ಜ್ವಾಳಿನೀದೇವೀ ತಿಳಿಯ ಬೇಕು. ಇದೇ ಕುಲಕ್ಕೆ ಸೇರಿದ ಇಮ್ಮಡಿ–ರಾಯ ದೇವರಸನು ಜ್ವಾಳಿನೀದೇವೀ ಲಬ್ಧವರ ಪ್ರಸಾದಾಸಾದಿತ ಕಲಿಗಳಂ ಕಾವ ಮಹಾಮಣ್ಡಳೇಶ್ವರ ನಾಗಿದ್ದನೆಂದು ಗದಗ ಶಾಸನದಲ್ಲಿ (ಸಾಲು: ೨೮.) ಇದಲ್ಲದೆ ನವಿಲುಗುಂದ ಅನ್ವಯಕ್ಕೆ ಸೇರಿದ ಚಂದವೆ, ರೇಕವ್ವೆ, ಸಕಳನೋಂಪಿ ಈ ಮೂರು ಉಲ್ಲೇಗಳಿರುವ ಹನ್ನೆರಡನೆಯ ಶತಮಾನದ ತ್ರುಟಿದ ಶಾಸನವೊಂದು ಒಂದು ಜೈನ ವಿಗ್ರಹದ ಪಾದಪೀಠದ ಮೇಲಿದೆ; ಇದು ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠದಲ್ಲಿದೆ; ಇದನ್ನು ಬಿಜಾಪುರ ಜಿಲ್ಲೆಯ ಸಿಂದಗೆ ತಾಲ್ಲೂಕಿನ ಯರಗಲ್ಲು ಗ್ರಾಮದಿಂದ ತರಲಾಗಿದೆ.

ಇದುವರೆಗಿನ ವಿವರಣಾತ್ಮಕ ಸಮೀಕ್ಷೆಯಿಂದ, ಮೊದಲಿನ ಒಂದು ಪ್ರಮೇಯವು **(Hypothesis)** ದಿವ್ಯ ತಿರುವನ್ನು ಪಡೆದು, ಮಯೂರಪುರವೆಂದರೆ ಧಾರವಾಡ ಜಿಲ್ಲೆಯಲ್ಲಿರುವ ಈಗಿನ ನವಿಲ್ಗುಂದವೇ ಎಂಬುದಾಗಿ ಸತ್ಯಸಂಗತಿ ಸ್ಥಾಪಿತವಾಗಿದೆ. ನವಿಲ್ಗುಂದ–ಮಯೂರಪುರವು ಕಳ್ತಲೆ–ಕತ್ತಲೆ ಕುಲದವರ ರಾಜ ಧಾನಿಯೂ ಆಗಿತ್ತು. ಈ ಅಪ್ಪಟ ಜೈನ ವಂಶದವರು ನವಿಲ್ಗುಂದ–(ಮಯೂರಪುರ) ದಲ್ಲಿ ಜಿನಾಲಯಗಳನ್ನೂ, ಜ್ವಾಳಾಮಾಲಿನೀದೇವಿಯ ದೇವಾಲಯವನ್ನೂ ಮಾಡಿಸಿದ್ದರು. ಹತ್ತನೆಯ ಶತಮಾನದ ಆರಂಭದ ವೇಳೆಗಾಗಲೆ ನಿರ್ಮಾಣವಾಗಿದ್ದ ಈ ಮಂದಿರವು ನಾಡನಲ್ಲಿ ಕೀರ್ತಿಗಳಿಸಿತ್ತು. ಈ ಪ್ರಾಚೀನ ಜ್ವಾಳಾಮಾಳಿನೀದೇವಿಯು ತುಂಬ ಪ್ರಸಿದ್ಧಳಾಗಿದ್ದುದಲ್ಲದೆ ಪ್ರಭಾವಶಾಲಿನಿಯೂ ಪೂಜನೀಯಳೂ ಆಗಿದ್ದಳು. ರಾಜರೂ ಸಾಮಂತರೂ ಮಹಾಮಂಡಲೇಶ್ವರರೂ ಈ ಜಿನಶಾಸನದೇವಿಯ ಭಕ್ತರಾಗಿದ್ದರು.

ಜ್ವಾಲಾಮಾಳಿನೀ ಶಾಸನದೇವಿಯ ದೇವಾಲಯ–ಬಿಂಬಾದಿಗಳು ದಕ್ಷಿಣ ಭಾರತದ ಬೇರೆ ರಾಜ್ಯಗಳಲ್ಲೂ ಇದ್ದುವೆಂದೂ ಶಾಸನಗಳಿಂದ ತಿಳಿದುಬರುತ್ತದೆ. ಈ ಲೇಖನದಲ್ಲಿ ಆಗಲೇ ಸೂಚಿಸಿರುವಂತೆ ಹೇಲಗ್ರಾಮ ಪೊನ್ನೂರಿನ (ದಕ್ಷಿಣದೇಶ ದ್ರಾವಿಡ ಗಣದ) ಹೇ(ಏ) ಲಾಚಾರ್ಯರು ನೀಲಗಿರಿ ಬೆಟ್ಟದ ಮೇಲೆ ತಪವೆಸಗಿ ಜ್ವಾಲಾಮಾಲಿನೀ ಕಲ್ಪದ ಚಾಲನೆಗೆ ಕಾರಣರಾದರೆಂಬ ಪ್ರತೀತಿಯಿದೆ **[Desai,P.B., Jainism in south India(1957), pp. 74,47-48].** ಕೇರಳದ ಪಾಲ್ ಘಾಟ್ ಜಿಲ್ಲೆಯ ಪರುವಶ್ಯೇರಿಯಲ್ಲಿ ಚಂದ್ರಪ್ರಭ ತೀರ್ಥಂಕರರನ್ನು ಗರ್ಭಗುಡಿಯಿಂದ ಪ್ರಾಂಗಣಕ್ಕೆ ತಂದಿಟ್ಟುಶಾಸ್ತಾ (ಅಯ್ಯಪ್ಪ) ಸ್ವಾಮಿಯೆಂದು ಪೂಜಿಸಲಾಗುತ್ತಿದೆ ಮತ್ತು ಅಲ್ಲಿಯೇ ಜ್ವಾಲಾ ಮಾಲಿನಿಯಕ್ಷಿಯ ವಿಗ್ರಹವನ್ನು 'ಭಗವತಿ' ಎಂದು ಕರೆದು ಪೂಜೆಮಾಡುತ್ತಿದ್ದಾರೆ **[Raghava Varier, M.R., Socio-Economic Functions of the Jain TemplesinKerala, 'SVASTISRI',p. 174].**